**ದಿನಾಂಕಃ 06.07.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ಆಗಿರುವ ನೋಂದಾಯಿತ ಸ್ವಾಧೀನ ರಹಿತ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. 1ನೇ ವಾದಿಯ ಸಹಿಯನ್ನು ಕೊನೆಯ ಪುಟದಲ್ಲಿ ನಿಪಿ-1(ಎ) ಎಂದು, 2ನೇ ವಾದಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರತಿವಾದಿಗಳ ಸಹಿಗಳನ್ನು ನಿಪಿ-1(ಸಿ) ಮತ್ತು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸುಂದ್ರಪ್ಪ ಮತ್ತು ಜಡೇಸ್ವಾಮಿರವರು ಸಾಕ್ಷಿ ಯಾಗಿ ಸಹಿ ಮಾಡಿರುತ್ತಾರೆ. ದಸ್ತಾವೇಜನ್ನು ಎಂ. ನಟರಾಜುರವರು ಬರೆದಿರುತ್ತಾರೆ. ನಮೂನೆ 15 ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸರ್ವೆ ನಂ. 330 ಕ್ಕೆ ಸಂಬಂಧಪಟ್ಟಂತೆ ಮೂರು ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು (3 ಪುಟಗಳು) ಗುರುತಿಸಲಾಯಿತು. ವಕೀಲರ ಮೂಲಕ ಕಳುಹಿಸಿದ ಲೀಗಲ್ ನೋಟಿಸನ್ನು ನಿಪಿ-4 ಎಂದು, ಅಂಚೆ ರಶೀದಿಯನ್ನು ನಿಪಿ-4(ಎ ರಿಂದ ಸಿ), ಹಿಂತಿರುಗಿ ಬಂದ ಅಂಚೆ ಕವರನ್ನು ನಿಪಿ-4(ಡಿ) ಎಂದು, ಅದನ್ನು ತೆರೆದು ನೋಡಲಾಗಿ ಅದರೊಳಗಿದ್ದ ನೋಟಿಸನ್ನು ನಿಪಿ-4(ಇ) ಎಂದು, ಹಿಂತಿರುಗಿ ಬಂದ ಅಂಚೆ ಕವರನ್ನು ನಿಪಿ-4(ಎಫ್ ) ಎಂದು, ಅದನ್ನು ತೆರೆದು ನೋಡಲಾಗಿ ಅದರೊಳಗಿದ್ದ ನೋಟಿಸನ್ನು ನಿಪಿ-4(ಜಿ) ಎಂದು, ಹಿಂತಿರುಗಿ ಬಂದ ಅಂಚೆ ಕವರನ್ನು ನಿಪಿ-4(ಹೆಚ್) ಎಂದು, ಅದನ್ನು ತೆರೆದು ನೋಡಲಾಗಿ ಅದರೊಳಗಿದ್ದ ನೋಟಿಸನ್ನು ನಿಪಿ-4(ಐ) ಎಂದು ಗುರುತಿಸಲಾಯಿತು. ವಾದಿಗಳು ಕಳುಹಿಸಿದ ಮೂರು ನೋಟಸಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ರಿಂದ ನಿಪಿ-7 ಎಂದು, ಅಂಚೆ ರಶೀದಿಗಳನ್ನು ಎಂದು ನಿಪಿ-5(ಎ) ರಿಂದ -7(ಎ) ಎಂದು ಗುರುತಿಸಲಾಯಿತು. ಹಿಂದಿರುಗಿ ಬಂದ ಕವರನ್ನು ನಿಪಿ-8 ಎಂದು, ನೋಟಿಸನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.